**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 96/2020**

ಚಾಸಾ:5　　ಪ್ರಾಸಾ:4

| | | |
|---|---|---|
| ಹೆಸರು | : | ಮಂಜು |
| ಗಂಡನ/ತಂದೆಯ ಹೆಸರು | : | ಗುರುಲಿಂಗಯ್ಯ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಟೈಲರ್ |
| ವಾಸ | : | ಕನ್ನಸಂದ್ರ |

**ದಿನಾಂಕ 09.06.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ಆರೋಪಿ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಮಹಜರ್ ಅನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**1**(ಡಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ಪಾಟೀ ಸವಾಲು: ಎಪಿಪಿಯವರಿಂದ:**

ದಿನಾಂಕ 18.01.2020 ರಂದು ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಕನ್ನಸಂದ್ರ ಗ್ರಾಮದ ಆರೋಪಿ ಶಿವರಾಜುರವರ ಹೋಟೆಲ್ ಮುಂಬಾಗದಲ್ಲಿ ಸಮಯ ರಾತ್ರಿ 10.30 ರಿಂದ 11 ಗಂಟೆಯವರೆಗೂ ಚಾಸಾ 2, 4 ಮತ್ತು 6 ಹಾಗೂ ನನ್ನ ಸಮಕ್ಷಮ ಚಾಸಾ 6 ರವರು ಕೃತ್ಯ ನಡೆದ ಸ್ಥಳ

ಪಂಚನಾಮೆಯನ್ನು ಮಾಡಿ ಸ್ಥಳ ಪಂಚನಾಮ ಕಾಲದಲ್ಲಿ ಆರೋಪಿಯ ಹೋಟೆಲ್ ನ್ನು ಪರಿಶೀಲಿಸಿದಾಗ ಹೋಟೆಲ್ ನಲ್ಲಿ ಇದ್ದ ಒಂದು ಕಾಟನ್ ರಟ್ಟಿನ ಬಾಕ್ಸ್ ಇದ್ದು, ಅದನ್ನು ನಿಮ್ಮಗಳ ಸಮಕ್ಷಮ ತೆಗೆದು ನೋಡಿದಾಗ

90 ML ನ 5 Haywards pouch ಗಳು ಹಾಗೂ

90 ML ನ 3 Old towering pouch ಗಳು,

90 ML ನ Black paper 5 pouch ಗಳು,

90 ML ನ old admiral 5 pouch ಗಳು ಹಾಗೂ

180 ML ನ Black paper 2 pouch ಗಳು ಅವುಗಳಲ್ಲಿ ತಲಾ ಒಂದೊಂದು sample ಗಾಗಿ FSL ಪರೀಕ್ಷೆಗೆ ಕಳುಹಿಸಬೇಕಿದ್ದು ಪ್ರತ್ಯೇಕಿಸಿ ಒಂದು ಬಿಳಿ ಬಟ್ಟೆ ಕಟ್ಟಿ S ಎಂಬ ಅಕ್ಷರದಿಂದ ತಮ್ಮ ಮುಂದೆ ಸೀಲ್ ಮಾಡಿ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವೈ.ಎಂ.ಎಸ್ ವಕೀಲರಿಂದಃ**

ಆರೋಪಿ ಪರ ವಕೀಲರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**